State of Karnataka with a message that the Houses will reconsider the provisions of this aid Bill which are likely to create a sense of insecurity in the incumbents of the highest offices in the Board besides putting in to jeopardy, their limited capacity for independent functioning as provided for under the present statute."

LEGISLATIVE BUSNESS

(MR. DEPUTY SPEAKER in the Chair)

The Electricity Supply (Karnataka Amendment) Bill 1989.

Motion to consider

ಶ್ರೀ ಜೆ. ಹೆಚ್. ಪಟೇಲ್ (ಅಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು).—ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ವಿಧಾನಸಭೆಯ ಕಾರ್ಯ ವಿಧಾನ ಮತ್ತು.....

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ ಈಗಾಗಲೇ ೪ ಗಂಟೆಯಾಗಿದೆ. ೫ ಗಂಟೆಗೆ ಈ ಸಭೆ ಮುಗಿಯಬೇಕಾಗುತ್ತದೆ. ಆದುದರಿಂದ ಈ ವಿಧೇಯಕವನ್ನು ನಾಳೆಗೆ ತೆಗೆದುಕೊಂಡರೆ ಪರವಾಯಿಲ್ಲ ನಾಳೆ ಇದನ್ನು ನಾವು ಪಾಸು ಮಾಡಿಕೊಡುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ —ಮಾನ್ಯ ಮಂತ್ರಿಗಳು ಈ ವಿಧೇಯಕವನ್ನು ಈಗಾಗಲೇ ಲೈಸ್ ಮಾಡಿಬಿಟ್ಟಿದ್ದಾರೆ ಇದರಲ್ಲಿ ಅಂಥಾದ್ದೇನೂ ಹೆಚ್ಚು ತಿದ್ದುಪಡಿ ಇಲ್ಲ. ಇದನ್ನು ಇವೊತ್ತೇ ತೆಗೆದುಕೊಳ್ಳೋಣ

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ವಿಧಾನಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮಗಳ ೧೧೪ ನೇ ನಿಯಮದ ಅನುಸಾರವಾಗಿ ಭಾರತದ ಸಂವಿಧಾನದ (೨೫೪) (೨)ನೇ ಅನುಚ್ಛೇದಕ್ಕೆ ಮೇರೆಗೆ ೧೯೮೦ ನೇ ಇಸವಿಯ ವಿದ್ಯುಚ್ಛಕ್ತಿ ಸರಬರಾಜು (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಬೇಕೆಂದು ನಾನು ಸೂಚಿಸುತ್ತೇನೆ.

The question was proposed

ಸ್ವಾಮಿ, ಈ ಹಿಂದಿನ ಸರ್ಕಾರ ೧೯೮೯ನೇ ಇಸವಿಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಅಧ್ಯಕ್ಷರನ್ನೂ ಮತ್ತು ಸದಸ್ಯರನ್ನೂ ನೇಮಕ ಮಾಡುವುದರ ಬಗ್ಗೆ ತಿದ್ದುಪಡಿ ತಂದಿದೆ. ಆದರೆ ಆದರಲ್ಲಿರತಕ್ಕ ಪದಾಧಿಕಾರಿಗಳಾದ ಮೆಂಬರ್ ಆಗಲೀ, ಛೇರ್‌ಮನ್‌ಆಗಲೀ, ಅವರು ನೇರವಾಗಿ ಸರ್ಕಾರದ ಆಜ್ಞೆಗೆ ಒಳಪಡದೇ ಇದ್ದರೆ ಕೆಲವು ಸಾರಿ ಅಲ್ಲಿಯ ಕೆಲಸಗಳು ಸ್ಥಗಿತವಾಗುತ್ತವೆ. ಆದ್ದರಿಂದಮಂಡಲಿಗೆ ಹಾನಿಯಾಗುತ್ತದೆ. ತಪ್ಪಾಗಿ ಹೇಳಬೇಕಾದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ಕೊಟ್ಟ ತೀರ್ಪಿಗೂ ಮುಕ್ತ ವಿದ್ಯುತ್ ನಿಗಮದವರು ಕೊಟ್ಟ ತೀರ್ಪಿಗೂ ಒಂದಕ್ಕೊಂದಕ್ಕೆ ಪರಸ್ಪರ ವಿರುದ್ಧವಾಗಿ ವಿದ್ಯುಚ್ಛಕ್ತಿ ಮಂಡಲಿಯ ಕೆಲಸಗಳು ಸ್ಥಗಿತವಾಗಿ ಎರಡು ವರ್ಷಗಳಕಾಲ ಇದಕ್ಕೆ ಪಾನಿಯಂಟಾಯಿತು. ಇದೇ ಸ್ಥಿತಿ ಇನ್ನು ಮುಂದೆಯಾದರೂ ಮುಂದುವರೆಯಬಾರದೆಂಬ ಉದ್ದೇಶದಿಂದ ನಾವು ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಹಿಂದಿನ ಸರ್ಕಾರದವರು ತಂದಿರತಕ್ಕಂಥಾ ತಿದ್ದುಪಡಿಯಲ್ಲಿ "Chairman and other members of the Board shall hold the office subject to the Pleasure of the State Government" ಎಂದಿತ್ತು. ಹಿಂದಿನ ಸರ್ಕಾರ ಈ ರೀತಿ ಮಾಡಿ ಕಳುಹಿಸಿದ್ದರು. ಆದರೆ ರಾಷ್ಟ್ರಪತಿಯವರು ತಿಳಿಸಿರುವಹಾಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯಾಗಲೀ ಅಥವಾ ಯಾವುದೇ ಇತರ ಮಂಡಲಿಯಾಗಲೀ ಇದ್ದರೆ ಈ ಆರ್ಟಿಕಲ್‌ಸ್ ಬಾಡಿಗೆ ಇದು ವಿರುದ್ಧವಾಗುತ್ತದೆ ಆದ್ದರಿಂದ ಇದನ್ನು ಮತ್ತೊಂದು ಪರಿಶೀಲನೆ ಮಾಡಿ ಇದನ್ನು ರೀ ಕನ್ಸಿಡರೇಷನ್ ಮಾಡಬೇಕೆಂದು ಕಳುಹಿಸಬೇಕಾಗಿದೆ. ಇದರ ಬಗ್ಗೆ ಹಿಂದಿನ ಸರ್ಕಾರದ ಅನುಮತಿ ಕೂಡಾ ತಿದೆ. ನಾನು ಹೆಚ್ಚಿಗೆ ಹೇಳುವುದಕ್ಕೂಗುವುದಿಲ್ಲ. ಈಗ ಇದಕ್ಕೆ ಈ ಸರ್ಕಾರದ ಅನುಮತಿ ಬೇಕಾಗಿರುವುದರಿಂದ ಈ ಒಂದು ತಿದ್ದುಪಡಿಯನ್ನು ತಮ್ಮ ಮುಂದಿಟ್ಟಿದ್ದೇನೆ. ಇದಕ್ಕೆ ತಾವು ದಯೆ ಮತಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಪಿ. ಒಡೆಯರಾಜ .—ಮಾನ್ಯ ಮಂತ್ರಿಗಳು ಆಟಾನಮಸ್ ಬಗ್ಗೆ ಏನು ಹೇಳಿದ್ದರು ಅದರ ಬಗ್ಗೆ ಹೆಚ್ಚು ಕ್ಲಾರಿಫಿಕೇಷನ್ ಕೊಟ್ಟರೆ ನಾನು ಪ್ರತಿಪಾದನೆ ಮಾಡುವುದಕ್ಕೋಗುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಇದರ ಬಗ್ಗೆ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಇವತ್ತಿನ ದಿವಸ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಒಂದು ಆಟಾನವಮಸ್ ಬಾಡಿಯಾಗಿದೆ. ಅದರ ಕೆಲಸ ಬಹಳ ಸ್ಪಷ್ಟವಾಗಿದೆ. ತಮಗೆ ಹೇಳಬೇಕಾದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಗಮ ಇವರೆಡೂ ಕೂಡಾ ಬೇರೆ ಬೇರೆ ಸಂಸ್ಥೆಗಳು. ಹೇಗೆಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಗಮ ಏನಿದೆ ಅದು ಜಾಯಿಂಟ್ ಸ್ಟಾಕ್ ಕಂಪನಿ ಮೇಲೆ ನಿಂತಿದೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಏನಿದೆ ಇದು ಪವರ್ ಸಪ್ಲೈ ಮಾಡುವುದಕ್ಕೆ ಇದೆ. ಇದು ಒಂದು ಆಟಾನವಮಸ್ ಬಾಡಿ. ಇದು ಒಂದು ಸ್ಟಾಟ್ಯೂಟ್ ಕೆಳಗೆ ಬರುತ್ತದೆ. ಹಿಂದಿನ ಒಂದು ತಿದ್ದುಪಡಿ ಪ್ರಕಾರ ಯಾವುದೇ ಒಂದು ಬೇರೆ ಸಂಸ್ಥೆಯಿಂದ ಈ ಸಂಸ್ಥೆಗೆ Representive ಆಗಿ ಚೇರ್‌ಮನ್ ಆಗಿ ಕರೆಸಿದರೆ ಅವರ ಹಿಂದಿನ ಸಂಸ್ಥೆಯಲ್ಲಿರುವ ಸೇವಾವಧಿ ಮತ್ತು ಸಂಬಳ ಸಾರಿಗೆಗಳು ನಾವು ಏನುಕೊಡಬೇಕಾಗಿತ್ತೊ ಆ ಖರ್ಚು ಮಂಡಳಿಯ ಮೇಲೆಯೇ ಬೀಳುತ್ತದೆ. ತಮಗೆ ಹೇಳಬೇಕಾದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ನಮ್ಮ ರಾಜ್ಯದಲ್ಲಿನಿದೆ ಅದು ಕಾನೂನು ಪ್ರಕಾರ ಸಂವಿಧಾನದ ಬದ್ಧವಾಗಿ ನಡೆದು ಕೊಂಡು ಹೋಗಬೇಕು. ಕಾನೂನು ಪ್ರಕಾರ ಸರ್ಕಾರದ ಕಾರ್ಯದರ್ಶಿಯವರು Subject to the Pleasure of the Government ಅಂತ ಇರುವುದರಿಂದ ಅವರು ವಿದ್ಯುತ್ ಮಂಡಲಿಯ ಪದಾಧಿಕಾರಿಗಳಿಗೆ ಯಾವುದಾದರೂ ವಿಷಯಗಳು ಬರೆದರೆ ಅವರಲ್ಲಿ ಏನಾದರೂ ಭಿನ್ನಾಭಿಪ್ರಾಯ ಬಂದರೆ ಆಗ ವಿದ್ಯುತ್ ಮಂಡಲಿಯ ಕೆಲಸ ಸ್ಥಗಿತವಾಗುತ್ತದೆ. ಈ ದೃಷ್ಟಿಯಿಂದ ಆ ಮಂಡಲಿಯ ಕೆಲಸಗಳು ಸುಗಮವಾಗಿ ನಡೆಯಂತ ಹಾಗೆ ಈ ಹಿಂದಿರುವ ತಿದ್ದುಪಡಿಯಲ್ಲಿ ಅನಾಮಲೀಸ್ ಇದ್ದುದರಿಂದ ಅದನ್ನು ಸರಿಪಡಿಸುವುದಕ್ಕೆ ಈ ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಇದಕ್ಕೆ ತಾವೆಲ್ಲರೂ ಒಪ್ಪಬೇಕು.

ಶ್ರಿ. ಎ.ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಇಂಡಿಯನ್ ಎಲೆಕ್ಟ್ರಿಸಿಟಿ ಆಕ್ಟ್ ಪ್ರಕಾರ ನಡೆದುಕೊಂಡು ಹೋಗಬೇಕಂ ಅದನ್ನು ಯಾರೂ ಕೂಡಾ ಇನ್ಸಿಸ್ಟ್ ಮಾಡುವ ಹಾಗಿಲ್ಲ. ಅವರು ನಿಷ್ಪೆಯಿಂದ ಕೆಲಸಮಾಡಿಕೊಂಡು ಹೋಗಬೇಕು. ಅವರನ್ನು ನೇಮಕ ಮಾಡುವುದಾಗಲೀ, ಹೊವುದೇ ಆಗಲೀ, ಕರ್ನಾಟಕ ಸರ್ಕಾರದ ಒಂದು ಕಾನೂನು ಕಟ್ಟಳೆ ಒಳಗೆ ಕಾನೂನು ಚೌಕಟ್ಟಿನ ಒಳಗೆ ನೇಮಕ ಮಾಡುತ್ತಾರೆ. ಈ ದೃಷ್ಟಿಯಿಂದ ನಮ್ಮ ರಾಷ್ಟ್ರಪತಿಯವರು ಈ ಬಗ್ಗೆ ಒಪ್ಪಿ ಕಳುಹಿಸಿದ್ದಾರೆ. ಆ ಪ್ರಕಾರ ಈ ಸಂಸ್ಥೆಯಲ್ಲಿ ಯಾವ ವ್ಯಕ್ತಿ ಕೆಲಸ ಮಾಡುತ್ತಾನೋ ಆ ವ್ಯಕ್ತಿಗೆ ತನ್ನ ಹಿಂದಿನ ಸೇವಾವಧಿಗೆ ಧಕ್ಕೆ ಬರಬಾರದೆಂಬ ದೃಷ್ಟಿಯಿಂದ ಮಾನ್ಯ ಸಚಿವರು ಉತ್ತರಿಸಿದ್ದಾರೆ. ಇದರ ಬಗ್ಗೆ ಇನ್ನೂ ಹೆಚ್ಚಿನ ವಿವರಣೆ ಕೊಡಬೇಕೆಂದು ನಾನು ಕೇಳುತ್ತೇನೆ.

ಶ್ರೀ ಜೆ. ಹೆಚ್ ಪಟೇಲ್.—ಇದರ ಬಗ್ಗೆ ಹೆಚ್ಚಿನ ವಿವರಣೆ ಹೇಳುವ ಆವಶ್ಯಕತೆ ಇಲ್ಲವೆಂದು ಭಾವಿಸುತ್ತದೆ. ಒಂದು ದೃಷ್ಟಿಯಿಂದ ಹೇಳುವುದಾದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯಲ್ಲಿರುವ ಅಧಿಕಾರಿಗಳ ಸೇವಾವಧಿ ಮತ್ತು ಸಂಬಳ ಏನು ಇದೆ ಆ ಪ್ರಕಾರವೇ ನಾವು ಕೊಡಬೇಕಾಗುತ್ತದೆ. ಇದರ ಬಗ್ಗೆ ಇದ್ದಂಥ ವಿವಾದಾತ್ಮಕ ವಿಷಯಗಳನ್ನು ನಿವಾರಣೆ ಮಾಡುವುದಕ್ಕೆ ಸಲುವಾಗಿ ಇದರಲ್ಲಿರುವ ಅನಾಮಲೀಸ್ ಅನ್ನು ತೆಗೆದು ಹಾಕಿದ್ದೇವೆ. As a matter of fact, we have taken corrective measure. ಇದು ಒಂದು ಆಟಾನವಮಸ್ ಬಾಡಿ ಇದನ್ನು ಯೂನಿವರ್ಸಿಟಿಗಾಗಲೀ ಬೇರೆ ಯಾವುದಕ್ಕೇ ಆಗಲಿ ಹೋಲಿಸುವ ಹಾಗಿಲ್ಲ. ತಮಗೆ ಹೇಳಬೇಕಾದರೆ ಈ ವಿದ್ಯುತ್ ನಿಗಮ ಏನಿದೆ, ಇದು ಪವರ್ ಜನರೇಟ್ ಮಾಡುವ ಕೆಲಸ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಏನಿದೆ ಅವರು ಪವರ್ ಸಪ್ಲೈ ಮಾಡುವುದನ್ನು ವಿತರಣೆ ಮಾಡುವ ಕೆಲಸ. ಇವೆರಡೂ ಒಂದಕ್ಕೊಂದು ಹೊಂದಾಣಿಕೆ ಮಾಡಿಕೊಂಡು ಕೆಲಸ ಮಾಡಿಕೊಂಡು ಹೋಗಬೇಕು ಈ ವಿದ್ಯುತ್ ಮಂಡಳಿಯವರು ಸರ್ಕಾರದ ಆದೇಶವನ್ನು ಏನಾದರೂ ಉಲ್ಲಂಘಿಸಿದರೆ ಸರಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಈ ವಿದ್ಯುಚ್ಛಕ್ತಿ ಮಂಡಳಿಯ ಆಡಳಿತ ಸಂಪೂರ್ಣವಾಗಿ ಸರ್ಕಾರಕ್ಕೆ ಸೇರಿರುವುದರಿಂದ ಸರ್ಕಾರದ ಆದೇಶದಂತೆ ನಡೆದುಕೊಂಡು ಹೋಗಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಅಧ್ಯಕ್ಷರೇ, ಏನು ಬದಲಾವಣೆ ಆಗಬೇಕಾದರೂ ಸರ್ಕಾರದ ಪಾಲಿಸಿಗನುಗುಣವಾಗಿ ಅವರು ಪಡೆದುಕೊಂಡು ಹೋಗಬೇಕು. ಇದೇತರಹ ತಿದ್ದುಪಡಿಯನ್ನು ಇತರೆ

ಎಲ್ಲಾ ಮಂಡಳಿಗಳ ಮೇಲೂ ತರಬೇಕೆಂದು ನಾನು ಹೇಳುತ್ತೇನೆ. ಸರ್ಕಾರದ ಆದೇಶವನ್ನು ಅವರು ಪಾಲಿಸಲೇಬೇಕು. ಆ ಮಂಡಲಿಗಳು ತಮ್ಮದೇ ಆದ ಸಾರ್ವಭೌಮ ರೀತಿಯಲ್ಲಿ ನಡೆದು ಕೊಂಡು ಹೋಗುವುದು ಸರಿಯಲ್ಲ.

೪–೩೦ ಪಿ.ಎಂ.

ಆದರೆ ಅವು ನಡೆದುಕೊಂಡು ಬಂದಿರತಕ್ಕದ್ದು ನೋಡಿದರೆ ಬಹಳ ಬೇಸರವಾಗುತ್ತದೆ. ಅದನ್ನು ಸರಿ ಮಾಡಲಿಕ್ಕೆ ಅಧಿಕಾರ ಇಲ್ಲದೇ ಇರತಕ್ಕ ಪರಿಸ್ಥಿತಿ ಇದೆ. ಇನ್ನು ಯಾವ ಯಾವ ಕಾನೂನುಗಳನ್ನು ಬದಲಾವಣೆ ಮಾಡಬೇಕಾಗಿದೆಯೋ ಅದರ ಬಗ್ಗೆ ಪುನರ್ ಪರಿಶೀಲನೆ ಮಾಡುವ ಅವಶ್ಯಕತೆ ಇದೆ ಅದನ್ನೂ ಮಾಡಬೇಕೆಂದು ನನ್ನ ಅಭಿಪ್ರಾಯಂ.

ಶ್ರೀ ಹೆಚ್. ಗಂಗಾಧರನ್. – ಮಂಡಲಿಗಳವರು ಸರ್ಕಾರದ ಆಜ್ಞೆಯನ್ನು ಉಲ್ಲಂಘನೆ ಮಾಡಲಿಕ್ಕೆ ಏನು ಒಂದು ಕಾನೂನಿನ ನೆರವು ತೆಗೆದುಕೊಳ್ಳುತ್ತಿದ್ದರು ಅದು ಇರಬಾರದು ಎನ್ನುವುದನ್ನು ಹೇಳುತ್ತಿದ್ದೀರಿ. ಸರ್ಕಾರದ ಯೋಜನೆಗನುಗುಣವಾಗಿ ಈ ಕೆಲಸ ನಡೆಯಬೇಕೆಂದು ಕ್ಲಾಜ್ ೨ (ಎ ನಲ್ಲಿ "They shall exercise such powers and perform such functions and be paid such remuneration and allowances and be governed by such conditions of serving on the State Government may from time to time by general or special order determine." ಎಂದು ಇರುವುದರಿಂದ ಸರ್ಕಾರಕ್ಕೆ ಅಧಿಕಾರವನ್ನು ಸ್ವೀಕಾರ ಮಾಡಿ ಸರ್ಕಾರದ ಹಿಡಿತದಿಂದ ದೂರ ಹೋಗಲಿಕ್ಕೆ ಅವಕಾಶ ಇಲ್ಲದ ರೀತಿಯಲ್ಲಿ ತಂದಿರುವುದರಿಂದ ಛೇರ್ಮನ್‌ರವರಿಗೆ, ಬೋರ್ಡ್ ಆಫ್ ಮೇಂಬರ್ಸ್ ಅವರ ಬಗ್ಗೆ ಸೇವಾ ನಿಯಮಾವಳಿಗಳು, ಅವರಿಗೆ ಇರತಕ್ಕ ಕಾಲಾವಧಿಯನ್ನು ಸರ್ಕಾರದ ಹಿಡಿತಕ್ಕೆ ತಂದಿರುವುದರಿಂದ ಚರ್ಚೆಗೆ ಅವಕಾಶ ಇಲ್ಲ. ಇಷ್ಟು ವಿಷಯ ಸದನ ಒಪ್ಪತಕ್ಕ ವಿಷಯಂ. ಆದುದರಿಂದ ಇದನ್ನು ಅಂಗೀಕಾರ ಮಾಡಬೇಕೆಂದು ನನ್ನ ಅಭಿಪ್ರಾಯಂ.

ಉಪಾಧ್ಯಕ್ಷರು.—ಪ್ರಸ್ತಾವವು ಹೀಗಿದೆ :

ಕರ್ನಾಟಕ ವಿಧಾನಸಭೆಯು ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳ ೧೦೪ನೇ ನಿಯಮದ ಅನುಸಾರವಾಗಿ ಭಾರತದ ಸಂವಿಧಾನದ ೨೫೪(೨)ನೇ ಅನುಚ್ಛೇದದ ಮೇರೆಗೆ ಪುನರ್ ಪರಿಶೀಲಿಸಿ ೧೯೮೦ನೇ ಇಸವಿಯ ವಿದ್ಯುಚ್ಛಕ್ತಿ ಸರಬರಾಜು (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅನುಮೋದಿಸಿ ಅನುಮತಿಯನ್ನು ನೀಡುವುದು.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು.

ಖಂಡಗಳ ಪರ್ಯಾಲೋಚನೆ

ಉಪಾಧ್ಯಕ್ಷರು.—ಪ್ರಸ್ತಾವನೆ ಏನೆಂದರೆ.—

"ಖಂಡ ೨ ಮತ್ತು ೩ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವನೆ ಅಂಗೀಕರಿಸಲಾಯಿತು

(ಖಂಡ ೨ ಮತ್ತು ೩ನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ ೧ ಇತ್ಯಾದಿ

ಉಪಾಧ್ಯಕ್ಷರು.—ಪ್ರಸ್ತಾವನೆ ಏನೆಂದರೆ "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಮತ್ತು ಪೀಠಿಕಾ ಭಾಗ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಯನ್ನು ಈ ವಿಧೇಯಕದಲ್ಲಿ ಸೇರಿಸಲಾಗಿದೆ."

(ಪ್ರಸ್ತಾವನೆ ಅಂಗೀಕಾರವಾಯಿತು)

(ಮೊದಲನೆಯ ಖಂಡ, ದೀರ್ಘಶೀರ್ಷಿಕೆ ಮತ್ತು ಪೀಠಿಕಾ ಭಾಗ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಯನ್ನು ಈ ವಿಧೇಯಕದಲ್ಲಿ ಸೇರಿಸಲಾಯಿತು).

(ಅಂಗೀಕಾರ ಸೂಚನೆ)

ಕರ್ನಾಟಕ ವಿಧಾನಸಭೆಯಂ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಂದ ಅನುಸಾರವಾಗಿ ಭಾರತದ ಸಂವಿಧಾನದ ೨೫೪(೨)ನೇ ಅನುಚ್ಛೇದದ ಪೇರೆಗೆ ೧೯೮೦ನೇ ಇಸವಿಯ ವಿದ್ಯುಚ್ಛಕ್ತಿ ಸರಬರಾಜು (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

)ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕವನ್ನು ಅನುಮೋದಿಸಲಾಯಿತು)

1983ನೇ ಇಸವಿಯ ಕರ್ನಾಟಕ ರಾಜ್ಯ ಮೋಟಾರು ವಾಹನ ತೆರಿಗೆಗೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕ

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು).—ಸನ್ಮಾನ್ಯ ಉಪಾಧ್ಯಕ್ಷರೆ, ನಾನು ೧೯೮೩ನೇ ಇಸವಿಯ ಕರ್ನಾಟಕ ರಾಜ್ಯ ಮೋಟಾರು ವಾಹನ ತೆರಿಗೆಗೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಪ್ರಾರ್ಥಿಸುತ್ತೇನೆ.

ಉಪಾಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ಎಂ.ಪಿ. ಪ್ರಕಾಶ್.—ಅಧ್ಯಕ್ಷರೆ, ಈಗ ಇರುವಂಥ ಕಾಯಿದೆಯಲ್ಲಿ, ಕೇಂದ್ರ ಸರ್ಕಾರ ಮತ್ತು ದೊಡ್ಡ ದೊಡ್ಡ ಖಾಸಗಿಯವರು ತಮ್ಮ ಬಸ್ಸುಗಳಲ್ಲಿ ತೆಗೆದುಕೊಂಡು ಹೋಗತಕ್ಕ ವರ್ಗೀಕರಣದಲ್ಲಿ ಹೆಚ್ಚಿನ ತೆರಿಗೆ ಕೊಡಬೇಕಾಗುತ್ತದೆ ಎನ್ನುವ ವಾದ ಇರುವುದರಿಂದ ಈ ಬಗ್ಗೆ ನಮ್ಮ ಶ್ರೇಷ್ಠ ನ್ಯಾಯಾಲಯದ ರಿಟ್ ನಂಬರ್ ೪೧೩, ೪೧೪ ಮತ್ತು ೪೧೭-೭೪ ದಿನಾಂಕ ೧೫-೬-೧೯೭೫ರ ತೀರ್ಪಿಗೆ ವರ್ಗೀಕರಣದ ಮೇಲೆ ತಿದ್ದುಪಡಿ ತಂದಿದ್ದೇವೆ. ಪ್ರೈವೇಟ್ ಸರ್ವೀಸ್ ವೆಹಿಕಲ್ಸ್‌ಗೆ ನೂರು ರೂಪಾಯಿಗಳು ಪರ್‌ಸೀಟ್ ಪರ್ ಕ್ವಾರ್ಟರ್‌ಗೆ ಎಂದು ಸೇರಿಸಿದ್ದೇವೆ. ಈ ವಾಕ್ಯವನ್ನು ಸೇರಿಸುವ ಮೂಲಕ ಸರಳವಾರತಕ್ಕ ತೆರಿಗೆಯನ್ನು ಆ ಬಸ್ಸುಗಳಿಗೆ ಹಾಕಲಿಕ್ಕೆ ಆಗುತ್ತದೆಂದು ಹೇಳುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ಪ್ರೈವೇಟ್ ಸರ್ವೀಸ್ ವೆಹಿಕಲ್ಸ್‌ಗಳಿಂದ ಬರತಕ್ಕ ತೆರಿಗೆಯ ಬಗ್ಗೆ ತಿದ್ದುಪಡಿ ತಂದಿದ್ದೀರಿ. ನಮಗೆ ಬರುವ ಆದಾಯ ಉಳಿಸುವ ದೃಷ್ಟಿಯಿಂದ ಎಷ್ಟು ಚರ್ಚೆ ಮಾಡಿದರೂ ಅನೇಕ ಲೋಪದೋಷಗಳು ಆಗುತ್ತವೆ. ಕೆ.ಎಸ್.ಆರ್.ಟಿ.ಸಿ ಯಲ್ಲಿ ನಾಲ್ಕೈದು ಸಾವಿರ ಬಸ್ಸುಗಳಿವೆ. ಸರ್ಕಾರಕ್ಕೆ ಬರುವ ತೆರಿಗೆ ೨೨ ಕೋಟಿ ರೂಪಾಯಿ, ಖಾಸಗಿಯವರದು ಒಂದು ಲಕ್ಷ ಬಸ್ಸುಗಳಿವೆ. ಅವರ ಟ್ಯಾಕ್ಸ್ ೩೦ ಕೋಟಿ ರೂಪಾಯಿ. ಒಟ್ಟು ಲೆಕ್ಕ ಹಾಕಿದರೆ ೫೫ ಕೋಟಿ ರೂಪಾಯಿ ಆದಾಯ ಬರುತ್ತದೆ. ಇದು ಹೇಗೆ ಅನಾಮಲಿ ಆಗುತ್ತದೆ. ಸರಿಯಾದ ಲೆಕ್ಕ ಹಾಕಿದರೆ ಕೋಟ್ಯಾಂತರ ರೂಪಾಯಿ ಹಣ ಬರಬೇಕಾಗುತ್ತದೆ. ನೂರಾರು ಕೋಟಿ ರೂಪಾಯಿ ಬರತಕ್ಕದು ಎಲ್ಲಿ ಸೋರಿ ಹೋಗುತ್ತದೆ ಎನ್ನುವ ಬಗ್ಗೆ ಆಲೋಚನೆ ಮಾಡಬೇಕು. ತಮಗೆ ಇಷ್ಟೆಲ್ಲಾ ಹಣ ಬಂದರೂ ೪೦ ಕೋಟಿ ರೂಪಾಯಿ ನಷ್ಟವಾಗುತ್ತಿದೆ ಎಂದು ಹೇಳುತ್ತಿದ್ದೀರಿ, ಇದಕ್ಕೆ ಕಾರಣ ಏನೆಂದರೆ ತಾವು ಎಲ್ಲಿ ಮನಾಪಲಿ ಮಾಡಿದ್ದೀರಿ ಅಂದರೆ ನಮಗೆ ಎಲ್ಲಿ ಆದಾಯ ಬರುವ ಜಾಗ ಇತ್ತು ಅಲ್ಲಿ ಮನಾಪಲಿ ಮಾಡಲಿಲ್ಲ. ಅದನ್ನು ಖಾಸಗಿಯವರಿಗೆ ಕೊಟ್ಟು ಬಿಟ್ಟಿದ್ದೀರಿ. ಎಲ್ಲಿ ನಷ್ಟ ಸಂಭವಿಸುತ್ತದೆ ಅಲ್ಲಿ ಸರ್ಕಾರದ ಬಸ್ಸುಗಳನ್ನು ಓಡಿಸುತ್ತಿದ್ದೀರಿ. ಅದರ ಬಗ್ಗೆ ಸರಿಯಾದಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇವೊತ್ತು ಏನು ಅನ್ಯಾಯವಾಗುತ್ತಿದೆ, ಸರ್ಕಾರಕ್ಕೆ ಬರತಕ್ಕ ಹಣ ಎಲ್ಲಿ ಸೋರಿ ಹೋಗುತ್ತಿದೆ ಅದನ್ನು ತಡೆಗಟ್ಟುವುದಕ್ಕೆ ತಂದಿದ್ದರೆ ನಾನು ಸ್ವಾಗತ ಮಾಡುತ್ತಿದ್ದೆ. ಇನ್ನು ಮುಂದಾದರೂ ೧೫೦ ಕೋಟಿ ರೂಪಾಯಿ ಆದಾಯ ಸೋರಿ ಹೋಗದಂತೆ ತಡೆಗಟ್ಟಲಿಕ್ಕೆ ತಿದ್ದುಪಡಿ ತರಬೇಕೆಂದು ಸೂಚಿಸಿ ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

ಶ್ರೀ ಎಂ ಪಿ. ಪ್ರಕಾಶ್.—ಈಗಾಗಲೇ ಈ ತಿದ್ದುಪಡಿ ಬಗ್ಗೆ ಸ್ವಾಗತ ಮಾಡಿದ್ದೀರಿ. ಆದರೂ ಕೆಲವು ಮಾಹಿತಿಗಳನ್ನು ಕೊಡಬೇಕಾದ್ದು ನನ್ನ ಕರ್ತವ್ಯ. ಮೋಟಾರ್ ವೆಹಿಕಲ್ಸ್‌ನಿಂದ ೮೨ ಕೋಟಿ ರೂಪಾಯಿಗಳ ತೆರಿಗೆಯನ್ನು ನಿರೀಕ್ಷೆ ಮಾಡಿದ್ದೇವೆ. ಇದರಲ್ಲಿ ೬ ಸಾವಿರ ಬಸ್ಸುಗಳಿಂದ ೨೨ ಕೋಟಿ ರೂಪಾಯಿ ತೆರಿಗೆ ಮಾಡುವುದರ ಜೊತೆಗೆ ಬೇರೆ ಖಾಸಗಿ ಬಸ್ಸುಗಳು, ಕಾರುಗಳು, ದ್ವಿಚಕ್ರ ವಾಹನಗಳು, ತ್ರಿಚಕ್ರ ವಾಹನಗಳು ಇರುವುದರಿಂದ ಆ ವಿಚಾರಗಳ ಬಗ್ಗೆ ಹೆಚ್ಚಿನ ಪ್ರಸ್ತಾಪ ಮಾಡದೆ ಸೋರುವಿಕೆ ಬಗ್ಗೆ ಬೇರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ತಿದ್ದುಪಡಿ ತಂದಿರತಕ್ಕ ಮುಖ್ಯ ಉದ್ದೇಶ ಕಾರ್ಯಾನಿಗೆ ನೌಕರರನ್ನು ಕರೆದುಕೊಂಡು ಹೋಗತಕ್ಕ ಸಂದರ್ಭದಲ್ಲಿ ಅವರು ಕೊಡತಕ್ಕ ಹೆಚ್ಚುವರಿ ತೆರಿಗೆ ಬಗ್ಗೆ ತಂದಿದ್ದೇವೆ. ಈಗ "Private service vehicle" means an